ಮೆ:ದಲಾಲ್ ಕನ್ಸ್‌ಲ್‌ಟೆಂಟ್‌ನವರು 1484.30ಲಕ್ಷಗಳಿಗೆ ಅಂದಾಜನ್ನು ತಯಾರಿಸಿದ್ದು ಕಳೆದ ಸಾಲಿನಲ್ಲಿ ಟೆಂಡರ್‌ಗೆ ಇಟ್ಟಿದ್ದು, ಕಡಿಮೆ ದರ ಬೆಲೆ ನಮೂದಿಸಿದ್ದ ಮೆ ನಾಗರ್ಜುನ ಕನ್ಸ್‌ಟ್ರಕ್ಷನ್ಸ್ ಕಂಪನಿರವರ ದರವು ತುಂಬಾ ಜಾಸ್ತಿ ಇದ್ದು, ಅದಕ್ಕೆ ಸಮಂಜಸವಾದ ಉತ್ತರವನ್ನು ದೃಢೀಕರಿಸದೇ ಇದ್ದುದರಿಂದ ಟೆಂಡರ್‌ಗಳನ್ನು ತಿರಸ್ಕರಿಸಲಾಗಿದೆ. ಪುನಃ ಟೆಂಡರ್‌ನ್ನು ಕರೆದು ಗುತ್ತಿಗೆದಾರರಿಗೆ ವಹಿಸುವ ಪ್ರಕ್ರಿಯೆ ಪ್ರಗತಿಯಲ್ಲಿದೆ.

2) ವಾಹನ ತಂಗುದಾಣ

ಈ ಕಾಮಗಾರಿಗೆ ರೂ.387.00 ಲಕ್ಷ (ಮುನ್ನೂರ ಎಂಬತ್ತೇಳು ಲಕ್ಷಗಳು)ಅಂದಾಜು ತಯಾರಾಗಿದ್ದು ಅರ್ಹಗುತ್ತಿಗೆದಾರರಿಗೆ ಟೆಂಡರ್ ಮುಖೇನ ವಹಿಸುವ ಪ್ರಕ್ರಿಯೆ ಪ್ರಗತಿಯಲ್ಲಿದೆ.

3) ವಸತಿ ನಿವೇಶನ ಹಾಗೂ ಮೂಲಭೂತ ಸೌಕರ್ಯಗಳು

ಮೆ: ಮೈಸೂರು ಕನ್ಸ್‌ಟ್ರಕ್ಷನ್ಸ್ ಕಂಪನಿ ಬೆಂಗಳೂರು ಇವರಿಗೆ ಕಾಮಗಾರಿಯನ್ನು ಟೆಂಡರ್ ದರದ ಮುಖಾಂತರ ವಹಿಸಲಾಗಿದ್ದು ಕಾಮಗಾರಿಯನ್ನು ಪ್ರಾರಂಭಿಸಲು ದಿನಾಂಕ: 27-5-99ರಂದು ಕಾರ್ಯಾದೇಶವನ್ನು ನೀಡಲಾಗಿದೆ. ದಿನಾಂಕ 29-5-99ರಂದು ವಿಧ್ಯುಕ್ತವಾಗಿ ಕಾಮಗಾರಿಯನ್ನು ಪ್ರಾರಂಭಿಸಲಾಗಿದೆ. ಭೌತಿಕ ಸರ್ವೆಕಾರ್ಯವು ಪ್ರಗತಿಯಲ್ಲಿರುತ್ತದೆ.

ಅ) ಕಾರ್ಯಾದೇಶ ನೀಡಿರುವ ವಸತಿ ನಿವೇಶನ ಮತ್ತು ಸೌಕರ್ಯಗಳ ಕಾಮಗಾರಿಯನ್ನು ಕಾರ್ಯಾದೇಶದ ಪ್ರಕಾರ 22-2-2001 ಇಸವಿಗೆ ಪೂರ್ಣಗೊಳಿಸಬೇಕಾಗಿರುತ್ತದೆ.

ಇ) ಕಾರ್ಯಾದೇಶ ನೀಡಿರುವ ಕಾಮಗಾರಿಗೆ ಮಾತ್ರ ಇಂತಿಷ್ಟೇ ಸಮಯದಲ್ಲಿ ಎಂದರೆ ದಿನಾಂಕ 22-2-2001 ರೊಳಗೆ ಪೂರ್ಣಗೊಳಿಸಬೇಕೆಂದು ಗುತ್ತಿಗೆ ಕರಾರು ಪತ್ರ ಮಾಡಿಕೊಂಡಿರುತ್ತದೆ.

ಮೈಸೂರಿನ ಕುವೆಂಪು ನಗರದ ಹೌಸಿಂಗ್ ಬೋರ್ಡ್ ಕಾಲೋನಿಯಲ್ಲಿ ಅಭಿವೃದ್ಧಿ ಕಾಮಗಾರಿಗಳು

1114 (1504)

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ (ಚಾಮರಾಜ) ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಮೈಸೂರಿನ ಕುವೆಂಪು ನಗರದಲ್ಲಿನ ಕರ್ನಾಟಕ ಹೌಸಿಂಗ್ ಬೋರ್ಡ್ ಕಾಲೋನಿಗಳನ್ನು ಯಾವ ವರ್ಷದಲ್ಲಿ ನಗರ ಪಾಲಿಕೆಗೆ ಹಸ್ತಾಂತರಿಸಲಾಯಿತು?

ಆ) ಹಸ್ತಾಂತರಿಸುವ ಸಮಯದಲ್ಲಿ ಈ ಕಾಲೋನಿಗಳ ಅಭಿವೃದ್ಧಿಗೆ ನಗರ ಪಾಲಿಕೆಗೆ ಕೆ.ಹೆಚ್.ಬಿ. ಯವರು ನೀಡಿದ ಮೊಬಲಗು ಎಷ್ಟು?

ಇ) ಸದರಿ ಹಣವನ್ನು ಈ ಕಾಲೋನಿಗಳ ಅಭಿವೃದ್ಧಿ ಕೆಲಸಗಳಿಗೆ ಅದೇ ವರ್ಷದಲ್ಲಿ ಖರ್ಚು ಮಾಡಲಾಯಿತೆ?

ಈ) ಹಾಗಿದ್ದಲ್ಲಿ ಅದರ ವಿವರಗಳೇನು? ಇಲ್ಲದಿದ್ದಲ್ಲಿ ಕಾರಣಗಳೇನು?

ಶ್ರೀ ಮಿರಾಜುದ್ದಿನ್ ಎನ್ ಪಟೇಲ್ (ಪೌರಾಡಳಿತ ರಾಜ್ಯ ಸಚಿವರು)

ಅ) 1987-88ನೇ ಸಾಲಿನಲ್ಲಿ ಮೈಸೂರು ಮಹಾನಗರ ಪಾಲಿಕೆಗೆ ಹಸ್ತಾಂತರಿಸಲಾಗಿತ್ತು

ಆ) ರೂ.9.00ಲಕ್ಷ

ಇ) ಮತ್ತು ಈ) ಕರ್ನಾಟಕ ಗೃಹ ಮಂಡಳಿಯು 9.00 ಲಕ್ಷ ರೂ.ಗಳನ್ನು 1987-88 ನೇ ಸಾಲಿನ ಅಂತ್ಯದಲ್ಲಿ ನೀಡಿದ್ದರಿಂದ ಅಭಿವೃದ್ಧಿಗಾಗಿ ಅದೇ ವರ್ಷ ಕೇವಲ 43, 800-00ರೂ ಗಳನ್ನು ಮಾತ್ರ ಖರ್ಚು ಮಾಡಲಾಗಿದೆ. ಉಳಿಕೆ ಹಣವನ್ನು ಸೇರಿಸಿ ಈ ಕಾಲೋನಿಗಳ ಅಭಿವೃದ್ಧಿಗಾಗಿ 1998-99 ರವರೆಗೆ ಒಟ್ಟು 36.23 ಲಕ್ಷ ರೂ.ಗಳನ್ನು ಖರ್ಚು ಮಾಡಲಾಗಿದೆ.

ಹಿಂದುಳಿದ ವರ್ಗಗಳ ಹಾಸ್ಟೆಲ್‌ಗಳಲ್ಲಿ ಖಾಲಿ ಇರುವ ಹುದ್ದೆಗಳು.

1115 (1535)

ಶ್ರೀ ಡಿ.ವಿ. ಸದಾನಂದ ಗೌಡ. (ಪುತ್ತೂರು) ಮಾನ್ಯ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

01) ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಹಾಸ್ಟೆಲ್‌ಗಳಲ್ಲಿ ಖಾಲಿ ಇರುವ ವಾರ್ಡ್‌ನ್ ಹುದ್ದೆಗಳ ಸಂಖ್ಯೆ ಎಷ್ಟು? ಮತ್ತು ಈ ಹುದ್ದೆಗಳನ್ನು ಎಂದಿನಿಂದ ಭರ್ತಿಮಾಡಲಾಗುವುದು?

02) ಇಲಾಖೆಯ ಹಾಸ್ಟೆಲ್‌ಗಳಿಗೆ ಆಹಾರ ಸರಬರಾಜು ಮಾಡಲು ಅನುಸರಿಸುವ ನಿಯಮಾವಳಿಗಳು ಏನು? ಗಿರಿಜನ ವಿವಿಧೋದ್ದೇಶ ಸಹಕಾರಿ ಸಂಘಗಳಿಂದ ಈ ಸರಬರಾಜು ಮಾಡುವಂತೆ ಸರ್ಕಾರ ಆಲೋಚಿಸಿದೆಯೇ? ಸರಬರಾಜಿನ ಉಸ್ತುವಾರಿಗೆ ಸಮಿತಿ ರಚಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಶ್ರೀ ಮಾಲಿಕಯ್ಯ ವಿ. ಗುತ್ತೇದಾರ್. (ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು)

01. ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖಾ ಹಾಸ್ಟೆಲ್‌ಗಳಲ್ಲಿ ಈ ಕೆಳಕಂಡಂತೆ ನಿಲಯಪಾಲಕರ ಹುದ್ದೆಗಳು ಖಾಲಿ ಇರುತ್ತದೆ.

01.	ನಿಲಯಪಾಲಕರು (ಪುರುಷರು)	35 ಹುದ್ದೆ
02.	ನಿಲಯಪಾಲಕರು (ಮಹಿಳೆಯರು)	41 ಹುದ್ದೆ
	ಒಟ್ಟು -	76 ಹುದ್ದೆ

ಇಲಾಖೆಯ ವ್ಯಂದ ಮತ್ತು ನೇಮಕಾತಿಯ ನಿಯಮಗಳನ್ವಯ, ಈ ಎಲ್ಲಾ ಹುದ್ದೆಗಳನ್ನು ಮುಂಬಡ್ತಿಯ ಮೂಲಕ ತುಂಬಬೇಕಾಗಿದೆ. ಈ ಹುದ್ದೆಗಳನ್ನು ಜರೂರು ತುಂಬಲು ಕ್ರಮವನ್ನು ಜರುಗಿಸಲಾಗುವುದು.

02) ಹಿಂದುಳಿದ ವರ್ಗಗಳ ಇಲಾಖೆಯ ಹಾಸ್ಟೆಲ್‌ಗಳಿಗೆ ಬೇಕಾಗುವ ಆಹಾರ ಸಾಮಗ್ರಿಗಳನ್ನು ಹಾಗೂ ಮತ್ತಿತರ ವಸ್ತುಗಳನ್ನು ಜನತಾ ಬಜಾರಿನಿಂದ, ನ್ಯಾಷನಲ್ ಕೋ-ಆಪರೇಟೀವ್ ಕನ್ಸ್ಯೂಮರ್ಸ್ ಫೆಡರೇಷನ್ ಆಫ್ ಇಂಡಿಯಾ (ಎನ್‌ಸಿಸಿಎಫ್) ಕೃಷಿ ಉತ್ಪನ್ನ ಮಾರುಕಟ್ಟೆ ಸಂಘ ಹಾಗೂ (ಟಿಎಪಿಸಿಎಂ) ಕೃಷಿ ಮಾರುಕಟ್ಟೆ ಸಮಿತಿ (ಎಪಿಎಂಸಿ) ಅಥವಾ ಮುಕ್ತಮಾರುಕಟ್ಟೆಯಿಂದ ಜನತಾ ಬಜಾರ್ ದರಗಳಿಗಿಂತ ಕಡಿಮೆ ದರದಲ್ಲಿ ಖರೀದಿಸಬಹುದಾಗಿದೆ. ಗಿರಿಜನ ವಿವಿಧೋದ್ದೇಶ ಸಹಕಾರಿ ಸಂಘಗಳಿಂದ ಸರಬರಾಜು ಮಾಡದಂತೆ ಸರ್ಕಾರದ ಆಲೋಚನೆ ಇರುವುದಿಲ್ಲ. ಸರಬರಾಜು ಉಸ್ತುವಾರಿಗೆ ಸಮಿತಿ ರಚಿಸುವ